ಜೊತೆಗೆ ಮಾತನಾಡಿ ಮಧ್ಯಾಹ್ನದ ಒಳಗಾಗಿ ಈ ವಿಚಾರದಲ್ಲಿ ಸೂಕ್ತವಾದ ಉತ್ತರವನ್ನು ನಾನು ಕೊಡಿಸುತ್ತೇನೆ.

ಆ) ಕೃಷ್ಣ ಮೇಲ್ದಂಡೆ ಯೋಜನೆಯಡಿಯಲ್ಲಿ ನಿರಾಶ್ರಿತರಿಗೆ ಪರಿಹಾರ

ಶ್ರೀ ಪ್ರಹ್ಲಾದ ಹನುಮಂತಪ್ಪ ಪೂಜಾರ್ (ಬಾಗಲಕೋಟೆ) : ಮಾನ್ಯ ಉಪಸಭಾಪತಿಯವರೆ, ನಾನುಕೇಳುತ್ತಿರುವುದು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾದ ನಾಗೇಗೌಡರಿಗೆ ಸಂಬಂಧಿಸಿರುವ ಪ್ರಶ್ನೆಯಾಗಿದ್ದು ಅವರು ಈಗ ಸದನದಲ್ಲಿ ಇದ್ದಿದ್ದರೆ ಅನುಕೂಲವಾಗುತ್ತಿತ್ತು ಎನ್ನುವ ಭಾವನೆ ನನ್ನದಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ನಿರಾಶ್ರಿತರಾದಂಥ ಸಂತ್ರಸ್ತರ ಮಕ್ಕಳಿಗೆ ಸರ್ಕಾರಿ ಸೇವೆಯಲ್ಲಿ ಆರಕ್ಷಣೆ ನೀಡುವ ಕುರಿತು ಸದನದ ಗಮನ ಸೆಳೆಯಬಯಸುತ್ತಿದ್ದೇನೆ. ಸದರಿ ಯೋಜನೆಯಡಿ ಬಾಗಲಕೋಟೆ ನಗರದ 2-3ರಷ್ಟು ಭಾಗ ಸೇರಿದಂತೆ ಸುಮಾರು 156 ಹಳ್ಳಿಗಳು ಮುಳುಗಡೆಯಾಗುತ್ತಿದ್ದು ಸರ್ಕಾರದ ಅಂದಾಜಿನಂತೆ ನಾಲ್ಕು ಲಕ್ಷದಷ್ಟು ಜನರನ್ನೊಳಗೊಂಡಿರುವ ಒಂದು ಲಕ್ಷ ಕುಟುಂಬಗಳು ಮುಳುಗಡೆಯಾಗುತ್ತಿರುವ ಸಂದರ್ಭದಲ್ಲಿ ಒಂದು ಅರ್ಥ ನಾವು ಕಲ್ಪಿಸಬಹುದು. ಏನೆಂದರೆ, ಸರ್ಕಾರದ ಈ ಬೃಹತ್ ಯೋಜನೆಯಿಂದ ಸುಮಾರು ನಾಲ್ಕು ಲಕ್ಷದಷ್ಟು ಜನರ ಉದ್ಯೋಗಗಳನ್ನು ಬಲವಂತವಾಗಿ ಸರ್ಕಾರ ಕಸಿದುಕೊಂಡು ಅವರುಗಳನ್ನು ನಿರುದ್ಯೋಗಿಗಳನ್ನಾಗಿ ಮಾಡಿದೆ. ಈ ದಿಸೆಯಲ್ಲಿ ಮಾನ್ಯ ಉಪಾಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಲಿಚ್ಛಿಸುವುದೇನೆಂದರೆ 'ನಾವು ನಿರುದ್ಯೋಗ ಸಮಸ್ಯೆಯನ್ನು ದೂರ ಮಾಡುತ್ತಿದ್ದು, ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದ್ದೇವೆ' ಎಂದು ಸರ್ಕಾರ ಅನೇಕ ವರ್ಷಗಳಿಂದ ಭರವಸೆಗಳನ್ನು ಕೊಡುತ್ತಿದೆ. ಇಂತಹ ಬೃಹತ್ ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ ಸರ್ಕಾರ ಅವರುಗಳನ್ನು ಬಲವಂತವಾಗಿ ನಿರುದ್ಯೋಗಿಗಳನ್ನಾಗಿ ಮಾಡುತ್ತಿರುವುದರಿಂದ ಅವರಿಗೆ ಉದ್ಯೋಗ ದೊರಕಿಸಿಕೊಡುವುದಾಗಲಿ ಇಲ್ಲವೇ ಅವರಿಗೆ ಜೀವನೋಪಾಯ ಮಾಡಲು ಬೇರೆ ದಾರಿ ಹುಡುಕಿಕೊಡುವುದು ಸರ್ಕಾರದ ಉತ್ತರದಾಯಿತ್ವವಲ್ಲವೇ? ಎಂದು ಪ್ರಶ್ನಿಸುತ್ತಿದ್ದೇವೆ. ಹಿಂದಿನ ಸಚಿವರಾದ ಕೆ.ಎನ್.ನಾಗೇಗೌಡರು ನೀರಾವರಿ ಯೋಜನೆಯಡಿ ಜಮೀನು, ಮನೆ, ಮಠ ಕಳೆದುಕೊಂಡಂಥ ನಿರಾಶ್ರಿತ ಸಂತ್ರಸ್ತ ಮಕ್ಕಳಿಗೆ ಸರ್ಕಾರಿ ಸೇವೆಯಲ್ಲಿ ಶೇಕಡ ಹತ್ತರಷ್ಟು ಮೀಸಲಾತಿ ಕಲ್ಪಿಸಿಕೊಡುವುದಾಗಿ ಭರವಸೆ ನೀಡಿದ್ದರು. ಇವೊತ್ತಿನವರೆವಿಗೂ ಆ ಕುರಿತು ಯಾವುದೇ ಆದೇಶ ಸರ್ಕಾರದಿಂದ ಹೊರಬಿದ್ದಿಲ್ಲ. ಇದರಿಂದಾಗಿ ಇವೊತ್ತು ಸಂತ್ರಸ್ತ ಮಕ್ಕಳೆಲ್ಲರೂ ತುಂಬಾ ಚಿಂತೆಯಲ್ಲಿದ್ದಾರೆ ಮತ್ತು ಸಾಯಲೂ ಆಗದ, ಬದಕಲೂ ಆಗದ ಪರಿಸ್ಥಿತಿಯಲ್ಲಿದ್ದು, ಸರ್ಕಾರದ ನಿರ್ಧಾರಕ್ಕಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಸರ್ಕಾರ ಒಳ್ಳೆಯ ತೀರ್ಮಾನ ತೆಗೆದುಕೊಂಡು ನಿರಾಶ್ರಿತ ಸಂತ್ರಸ್ತರ ಮಕ್ಕಳಿಗೆ ಸರ್ಕಾರಿ ಸೇವೆಯಲ್ಲಿ ಶೇಕಡ 10ರಷ್ಟು ಮೀಸಲಾತಿ ಅಥವಾ ಅದಕ್ಕಿಂತ ಹೆಚ್ಚು ಶೇಕಡಾದಷ್ಟು ಮೀಸಲಾತಿ ಕಲ್ಪಿಸಿಕೊಡುವ ಮೂಲಕ ಒಂದು ಲಕ್ಷ ಕುಟುಂಬದ ಜನರಿಗೆ ದಾರಿದೀಪವಾಗಬೇಕು. ಈ ನಿಟ್ಟಿನಲ್ಲಿ ಸರ್ಕಾರದಿಂದ ನಿರ್ದಿಷ್ಟವಾದ ಉತ್ತರವನ್ನು ಅಪೇಕ್ಷಿಸುತ್ತಿದ್ದೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರು ಮಾತನಾಡುತ್ತಾ ನಾವು ಅಧಿಕಾರಾವಧಿಯ ಕೊನೆಯಲ್ಲಿದ್ದೇವೆಂದು

ಏನು ಹೇಳುತ್ತಿದ್ದಾರೆ. ಇದಕ್ಕೆ ಉತ್ತರವಾಗಿ ಹೇಳುವುದಾದರೆ ನಮ್ಮ ಈ ವರ್ಷದ ಅವಧಿ ಕೊನೆಯಾಗಿರಬಹುದು. ಆದರೆ, ಮತ್ತೆ ನಾವು ಅಧಿಕಾರಕ್ಕೆ ಬರುವುದಿಲ್ಲವೆಂದು ತಾವು ಭಾವಿಸಿಕೊಳ್ಳಬಾರದು, ಅದಕ್ಕೆ ಬೇರೆ ಕಾರಣವೇ ಇದೆ. ಈಗ ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾಗಿರುವ ಪ್ರದೇಶದಲ್ಲಿ ಪುನರ್ ನಿವೇಶನಕ್ಕೊಳಗಾಗಿರುವ ಅನೇಕ ಸಂತ್ರಸ್ತರಿಗೆ ಅನುಕೂಲಗಳನ್ನು ಕಲ್ಪಿಸಿಕೊಟ್ಟು ಭಾರತ ದೇಶದ ಯಾವುದೇ ರಾಜ್ಯದವರು ಮಾಡಲಾರದಂಥ ನೀರಾವರಿ ಯೋಜನೆಯಡಿ ಮುಳುಗಡೆಯಾದ ಜಮೀನಿಗೆ ಒಂದು ಎಕರೆಗೆ ರೂ 1 ಲಕ್ಷ 10 ಸಾವಿರಗಳಷ್ಟು ಪರಿಹಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಕೊಡುವುದಕ್ಕೆ ಕ್ರಮ ಕೈಗೊಂಡಿದ್ದಾರೆ. ಖುಷ್ಕಿ ಜಮೀನಿಗೆ ಸಂಬಂಧಪಟ್ಟಂತೆ ಒಂದು ಎಕರೆಗೆ ರೂ. 60 ಸಾವಿರದಷ್ಟು ಪರಿಹಾರ ನೀಡಲೂ ಸಹ ಕ್ರಮ ಕೈಗೊಂಡಿದ್ದು, ಅಲ್ಲದೆ, ಭೂಮಿ, ಮನೆ ಕಳೆದುಕೊಂಡವರಿಗೆ ಸವಕಳಿಯನ್ನು ತೆಗೆದುಕೊಳ್ಳಬಾರದೆಂಬ ನಿಯಮಾವಳಿಯನ್ನು ನಾವು ಮಾಡಿದ್ದೇವೆ. ಮಾನ್ಯ ಶಾಸಕರಿಗೆ ಗೊತ್ತಿರುವಂತೆ ಆ ಪ್ರದೇಶದ ಎಲ್ಲಾ ಶಾಸಕರುಗಳು ಕೂಡ ಸರ್ಕಾರ ತೆಗೆದುಕೊಂಡಿರುವ ಇಂತಹ ಒಳ್ಳೆಯ ನಿರ್ಧಾರಕ್ಕೆ ಅಭಿನಂದಿಸಿದ್ದಾರೆ. 'ಉದ್ಯೋಗ ಆರಕ್ಷಣೆ' ಎನ್ನುವ ಮಾತನ್ನು ಹೇಳಿದಾಗ 'ಉದ್ಯೋಗ' ಎನ್ನುವ ಶಬ್ದ ಅದರಲ್ಲಿ ಇಲ್ಲ. ಉದ್ಯೋಗವೆಂದರೆ ಹೆಚ್ಚು ನೀರಾವರಿಯಾದಂಥ ಸಂದರ್ಭದಲ್ಲಿ ಹೆಚ್ಚು ಜನರಿಗೆ ಉದ್ಯೋಗ ತನ್ನಷ್ಟಕ್ಕೆ ತಾನೇ ಅಭಿವೃದ್ಧಿ ಕಾರ್ಯಗಳ ಮೂಲಕ ಸಿಗುತ್ತದೆ. ಸರ್ಕಾರದಲ್ಲಿ ಕಾರ್ಯನಿರ್ವಹಿಸುವುದು ಮಾತ್ರ ಉದ್ಯೋಗವೆಂದು ಭಾವಿಸಿಕೊಳ್ಳುವುದಾದರೆ ಬಹಳ ಕಷ್ಟದ ಪರಿಸ್ಥಿತಿವುಂಟಾಗುತ್ತದೆ. ಈ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಅಕಸ್ಮಾತ್ ಸದನದಲ್ಲಿ ಅಂತಹ ವಚನ ಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲದಿರುವುದರಿಂದ ನಾನು ಈ ಕುರಿತು ನೀರಾವರಿ ಸಚಿವರ ಜೊತೆ ಮಾತನಾಡಿ ಅಕಸ್ಮಾತ್ ಅಂತಹ ವಚನವನ್ನು ಏನಾದರೂ ಸದನದಲ್ಲಿ ಕೊಟ್ಟಿದ್ದರೆ ಅದನ್ನು ನೆರವೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಯೋಜನೆಯಡಿ ಭೂಮಿ ಕಳೆದುಕೊಂಡಂಥವರಿಗೆ ಉದ್ಯೋಗ ಕೊಡುವುದು ಕಷ್ಟವಾಗಬಹುದು.

ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್ : ಮಾನ್ಯ ಉಪಾಧ್ಯಕ್ಷರೆ, ಸವಕಳಿ ಇರಲಾರದೆ ಪರಿಹಾರ ಕೊಡುತ್ತೇವೆನ್ನುವ ವಿಚಾರವನ್ನು ಸರ್ಕಾರದ ಪರವಾಗಿ ಸಚಿವರಾದ ಎಂ.ಪಿ.ಪ್ರಕಾಶ್‌ರವರು ಏನು ತಿಳಿಸಿದ್ದಾರೆ. ಇದು ಸಂಪೂರ್ಣ ಅಪ್ಪಟ ಸುಳ್ಳು ಎಂದು ಹೇಳದೆ ಬೇರೆ ವಿಧಿಯಿಲ್ಲ. ಇವೊತ್ತು ಅಲ್ಲಿನ ಲಕ್ಷಾಂತರ ಜನರು ತಮ್ಮ ಬೇಡಿಕೆಗಳನ್ನಿಟ್ಟುಕೊಂಡು ಬೆಂಗಳೂರಿಗೆ ಬಂದು ಧರಣಿ ಸತ್ಯಾಗ್ರಹ ಮಾಡಿದ್ದು ಸವಕಳಿ ಇರಲಾರದಂತೆ ಪರಿಹಾರ ಕೊಡುತ್ತೇವೆಂದು ಭರವಸೆ ಕೊಟ್ಟರೂ ಸಹ ಇವೊತ್ತಿನವರೆವಿಗೂ ಅಲ್ಲಿ ಆದೇಶ ಜಾರಿಯಾಗಿಲ್ಲ. ಎರಡನೆಯಾಗಿ, ಇದೇ ಸದನದಲ್ಲಿ ಯೋಜನೆಯಡಿ ನಿರಾಶ್ರಿತರಾಗುವ ಸಂತ್ರಸ್ತರ ಮಕ್ಕಳಿಗೆ ಸರ್ಕಾರಿ ಸೇವೆಯಲ್ಲಿ ಶೇಕಡಾ 5 ರಿಂದ 10ರಷ್ಟು ಮೀಸಲಾತಿ ಕಲ್ಪಿಸಿಕೊಡಲು ಇಚ್ಛಿಸುತ್ತಿದ್ದು ಈ ಕುರಿತು ಗ್ಯಾರಂಟಿಯಾಗಿ ಆದೇಶ ಹೊರಡಿಸುತ್ತಿದ್ದೇವೆಂದು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾದ ನಾಗೇಗೌಡರು ಮತ್ತು ಕಂದಾಯ ಸಚಿವರಾದ ಸೋಮಶೇಖರ್‌ರವರೂ ಕೂಡ ಭರವಸೆ ನೀಡಿದ್ದರ ಹಿನ್ನಲೆಯಲ್ಲಿ ಇವೊತ್ತು

ಅನಿವಾರ್ಯವಾಗಿ ನಾನು ಈ ಪ್ರಶ್ನೆಯನ್ನು ಕೇಳಲೇಬೇಕಿರುವುದರಿಂದ ಸರ್ಕಾರದಿಂದ ನಿರ್ದಿಷ್ಟ ಉತ್ತರಕ್ಕೆ ಒತ್ತಾಯಿಸಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್‌ರವರು ಸದನದ ಬಾವಿಗೆ ಬಂದು ಧರಣಿ ಹೂಡಿದರು)

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರು ಇದಕ್ಕಾಗಿ ಧರಣಿ ಕೂರುವ ಅಗತ್ಯವಿಲ್ಲ. ತಾವು ವಿಷಯ ಪ್ರಸ್ತಾಪಿಸಿ ಸರ್ಕಾರದ ಗಮನವನ್ನು ಸೆಳೆದಿದ್ದೀರಿ. ಎಲ್ಲರೂ ಈ ರೀತಿ ಧರಣಿ ಕೂರುವುದಾರೆ ಸರ್ಕಾರವನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ. ನಿರಾಶ್ರಿತ ಸಂತ್ರಸ್ತರ ಮಕ್ಕಳಿಗೆ ಸರ್ಕಾರಿ ಸೇವೆಯಲ್ಲಿ ಶೇಕಡ 5 ರಿಂದ 10 ರಷ್ಟು ಮೀಸಲಾತಿ ಕಲ್ಪಿಸುವುದಾಗಿ ಸರ್ಕಾರ ಭರವಸೆ ನೀಡಿದೆಯೆಂದು ತಾವು ಈಗ ಹೇಳಿರುವುದರಿಂದ ಸರ್ಕಾರ ಸದನದಲ್ಲಿ ಅಂತಹ ವಚನವನ್ನು ಏನಾದರೂ ಕೊಟ್ಟಿದ್ದರೆ ಖಂಡಿತವಾಗಿಯೂ ಅದನ್ನು ನೆರವೇರಿಸುತ್ತೇವೆ. ಅಲ್ಲದೆ, ಸರ್ಕಾರಿ ಭರವಸೆಗಳ ಸಮಿತಿಯು ಇದ್ದು, ಸದರಿ ಸಮಿತಿಯಲ್ಲಿಯೂ ತಾವು ಆ ಕುರಿತು ಪ್ರಸ್ತಾಪಿಸಬಹುದು. ಇನ್ನು ಉಳಿದಂಥ ವಿಚಾರವಾಗಿ ಮಾತನಾಡಿ 'ನಾವು ಹೇಳಿರುವುದರ ಬಗ್ಗೆ 'ಅಪ್ಪಟ ಸುಳ್ಳು' ಎಂದು ಏನು ಹೇಳಿದ್ದೀರಿ, ಈ ಬಗ್ಗೆ ಹೇಳುವುದಾದರೆ ಸರ್ಕಾರ ಪರಿಹಾರ ಕೈಕೊಡದಿದ್ದರೆ ಯಾವ ನಿರಾಶ್ರಿತರೂ ಕೂಡ ಪುನರ್ ನಿವೇಶನ ಕೇಂದ್ರಕ್ಕೆ ಹೋಗಲು ಸಾಧ್ಯವಿಲ್ಲ. ಸರ್ಕಾರ ಕೈಗೊಂಡಿರುವ ಪರಿಹಾರ ಕ್ರಮದ ವಿಚಾರದಲ್ಲಿ ವಿಶ್ವಬ್ಯಾಂಕ್‌ನವರು ಸಹ ಮೆಚ್ಚುಗೆ ಪತ್ರ ಕೊಟ್ಟಿದ್ದಾರೆ. ಯೋಜನೆಯಡಿ ಭೂಮಿ ಕಳೆದುಕೊಂಡವರಿಗೆ ನೀರಾವರಿ ಭೂಮಿಯಾಗಿದ್ದರೆ ಒಂದು ಎಕರೆಗೆ ರೂ. 1 ಲಕ್ಷ 10 ಸಾವಿರ ಹಾಗೂ ಖುಷ್ಕಿ ಜಮೀನಿಗೆ ಸಂಬಂಧಿಸಿದಂತೆ ರೂ. 60 ಸಾವಿರದಂತೆ ಸವಕಳಿ ಮುರಿಯದ ರೀತಿಯಲ್ಲಿ ಪರಿಹಾರ ಕೊಟ್ಟಿದ್ದು ಮನೆಗಳನ್ನು ಕಳೆದುಕೊಂಡವರಿಗೆ ಪುನರ್ ನಿವೇಶನಕ್ಕೆ ಸಂಬಂಧಿಸಿದಂತೆ ಪೂರಕವಾದ ಎಲ್ಲಾ ರೀತಿಯ ನಾಗರೀಕ ಸೌಲಭ್ಯಗಳನ್ನು ಒದಗಿಸಿರುವುದು ತಮಗೆ ಗೊತ್ತಿರುವ ವಿಚಾರವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಆಲಮಟ್ಟಿ ಅಣೆಕಟ್ಟು ಪ್ರದೇಶಕ್ಕೆ ಭೇಟಿಯಿತ್ತ ಸಂದರ್ಭದಲ್ಲಿ ತಮ್ಮನ್ನು ಹಾಗೂ ಇತರ ಶಾಸಕರುಗಳನ್ನು ಕರೆಸಿ ಮಾತನಾಡಿರುವ ಸಂಗತಿ ತಮಗೆ ವೇದ್ಯವಾಗಿದೆ. ಅಲ್ಲದೆ, ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ತಾವು ಅಭಿನಂದಿಸಿದ್ದೀರಿ. ಆದುದರಿಂದ, ತಾವು ಅಪ್ಪಟ ಸುಳ್ಳು ಎಂದು ಹೇಳಿರುವುದು ಸರಿಯಾದ ಮಾತಲ್ಲವೆಂದು ಹೇಳುತ್ತೇನೆ. ಈಗ ನಾನು ತಮ್ಮ ಮೂಲಕ ಅವರಲ್ಲಿ ಅರಿಕೆಮಾಡಿಕೊಳ್ಳುತ್ತಿರುವುದೇನೆಂದರೆ, ತಮ್ಮ ಧರಣಿ ಕೈಬಿಟ್ಟು ತಾವು ತಮ್ಮ ಆಸನಕ್ಕೆ ಹಿಂತಿರುಗಬೇಕು. ಮಾನ್ಯ ಮಂತ್ರಿಗಳು ಬಂದ ತಕ್ಷಣವೇ ತಮ್ಮ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ರಾಜಶೇಖರ ವೀರಣ್ಣ ಶೀಲವಂತ : ನಮ್ಮ ಜಿಲ್ಲೆಯ ಎಲ್ಲಾ ಶಾಸಕರುಗಳು ಒಟ್ಟುಗೂಡಿ ಬಹಳ ಸಾರಿ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾದ ನಾಗೇಗೌಡರನ್ನು ಭೇಟಿಯಾಗಿ ಪ್ರಸ್ತಾಪಿಸಿದ್ದರೂ 'ಈ ಸಲ ಮಾಡುತ್ತೇವೆ, ಇನ್ನೊಂದು ಸಲ ಮಾಡುತ್ತೇವೆ' ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ : ಈ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಕಳುಹಿಸಿರುವ ನೋಟೀಸಿಗೆ ತಾವು ಸಹಿ ಹಾಕಿಲ್ಲ. ತಾವೆಲ್ಲಾ ಶೂನ್ಯ ವೇಳೆಯಲ್ಲಿ ಈ ರೀತಿ ಮಾತನಾಡಿದರೆ ಹೇಗೆ?

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ಹೂಡಿದ್ದ ಮಾನ್ಯ ಸದಸ್ಯರಾದ ಶ್ರೀ ಪ್ರಹ್ಲಾದ್

ಹನುಮಂತಪ್ಪ ಪೂಜಾರ್‌ರವರು ಸರ್ಕಾರ ನೀಡಿದ ಭರವಸೆಗೆ ಒಪ್ಪಿ ಧರಣಿಯನ್ನು ಹಿಂತೆಗೆದುಕೊಂಡು ಆಸನಕ್ಕೆ ಮರಳಿದರು)

ಕ) ಗ್ರಾಮಸಭೆಯಲ್ಲಿ ನಿರ್ಧರಿಸಿದಂಥ ಫಲಾನುಭವಿಗಳಿಗೆ ಆಶ್ರಯ ಯೋಜನೆ

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಉಪಾಧ್ಯಕ್ಷರೆ, ಯಾವುದೇ ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ಗ್ರಾಮಸಭೆಯು ತಯಾರಿಸಬೇಕಾಗಿದ್ದು ಪಟ್ಟಿಯನ್ನು ತಯಾರಿಸುವ ಅಧಿಕಾರ ಕಾನೂನಿನಡಿ ಗ್ರಾಮಸಭೆಗೆ ಪ್ರಾಪ್ತವಾಗಿರುತ್ತದೆ. ಅಲ್ಲದೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ವಿಚಾರಧಾರೆಯೂ ಕೂಡ ಅದಕ್ಕೆ ಪೂರಕವಾಗಿದೆ. ಆದರೆ, ಹಿರೇಕೆರೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಭಾಗ್ಯಜ್ಯೋತಿ ಯೋಜನೆಯಡಿ ಫಲಾನುಭವಿಗಳ ಯಾದಿಯನ್ನು ತಾಲ್ಲೂಕು ಪಂಚಾಯಿತಿ ಸಮಿತಿಯ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಸಿದ್ಧಪಡಿಸಿ ಕಳುಹಿಸಿರುತ್ತಾರೆ. ಗ್ರಾಮಸಭೆಯು ಆಯ್ಕೆ ಮಾಡಿದಂಥ ಪಟ್ಟಿಯನ್ನು ಅವರು ಗಣನೆಗೆ ತೆಗೆದುಕೊಂಡಿಲ್ಲ. ಇದರಿಂದಾಗಿ ಗ್ರಾಮ ಪಂಚಾಯಿತಿಯವರಿಗೆ ಗ್ರಾಮಸಭೆಯಲ್ಲಿ ನಾಗರೀಕರ ಪ್ರಶ್ನೆಗಳಿಗೆ ಉತ್ತರ ಹೇಳದಿರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ ನಿಯಮ ಬಾಹಿರವಾಗಿ ತಾಲ್ಲೂಕು ಪಂಚಾಯಿತಿ ಸಮಿತಿ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಕಳುಹಿಸಿರುವ ಫಲಾನುಭವಿಗಳ ಪಟ್ಟಿಯನ್ನು ತಡೆಹಿಡಿದು ಗ್ರಾಮಸಭೆಯವರು ಕಳುಹಿಸಿರುವ ಫಲಾನುಭವಿಗಳ ಪಟ್ಟಿಗೆ ಆದ್ಯತೆ ನೀಡಬೇಕೆಂದು ನಾನು ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಶಾಸಕರು ಹೇಳಿರುವಂತೆ ಗ್ರಾಮಸಭೆಯಲ್ಲಿ ನಿರ್ಧರಿಸಿದಂಥ ಫಲಾನುಭವಿಗಳ ಪಟ್ಟಿಯನ್ನು ಆಶ್ರಯ ಯೋಜನೆಗೆ ಸಂಬಂಧಿಸಿದಂತೆ ಇದ್ದರೆ ಆಶ್ರಯ ಸಮಿತಿಯ ಅಧ್ಯಕ್ಷರಾದ ತಾವು ಪರಿಶೀಲಿಸಿ ಅಲ್ಲಿಂದ ಬಂದಿರುವಂಥ ಯಾದಿಯಲ್ಲಿಯೇ ಆದ್ಯತೆ ಮೇರೆಗೆ ತಾವು ಕೊಡಬೇಕಾಗುತ್ತದೆ. ಭಾಗ್ಯಜ್ಯೋತಿ ಯೋಜನೆಗೂ ಕೂಡ ಇದೇ ಅನ್ವಯವಾಗುತ್ತದೆ. ಭಾಗ್ಯಜ್ಯೋತಿ ಯೋಜನೆ ವಿಚಾರದಲ್ಲಿ ತಾವು ಪತ್ರ ಬರೆದಿರುವುದರಿಂದ ಈ ದಿವಸವೇ ದೂರವಾಣಿ ಮೂಲಕ ತಿಳಿಸಿ ಅಲ್ಲಿಂದ ವರದಿ ತರಿಸಿಕೊಂಡು ತಾವು ಹೇಳಿದಂತೆ ಆ ರೀತಿಯ ಅಕ್ರಮವಾಗಿದ್ದರೆ, ಕಡೆಗಣಿಸಿದ್ದರೆ ತಡೆಹಿಡಿಯಬೇಕು ಮತ್ತು ಆ ವಿಚಾರದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿರುವ ಆಶ್ರಯ ಸಮಿತಿ ನಿರ್ಧರಿಸಿದಂತೆಯೇ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸುತ್ತೇನೆ.

ಖ) ಬಾದಾಮಿ ಹಾಗೂ ಹುನಗುಂದ ತಾಲ್ಲೂಕಿನ ಭಾಗಗಳಲ್ಲಿ ಸಾರಾಯಿ ಗುತ್ತಿಗೆದಾರರಿಂದ ಆಗುತ್ತಿರುವ ದಬ್ಬಾಳಿಕೆ

ಶ್ರೀ ರಾಜಶೇಖರ ವೀರಣ್ಣ ಶೀಲವಂತ (ಗುಳ್ಳೇದ ಗುಡ್ಡ) : ಮಾನ್ಯ ಉಪಾಧ್ಯಕ್ಷರೆ, ನನ್ನ ಮತ ಕ್ಷೇತ್ರವೂ ಸೇರಿದಂತೆ ಬಾದಾಮಿ ಹಾಗೂ ಹುನಗುಂದ ತಾಲ್ಲೂಕಿನ ಭಾಗಗಳಲ್ಲಿ ಸಾರಾಯಿ ಗುತ್ತಿಗೆದಾರರು ಒಂದು ರೀತಿಯ ಪಾಳೇಗಾರರಂತೆ ವರ್ತಿಸುತ್ತಿದ್ದಾರೆ. ಮೊನ್ನೆ ದಿನಾಂಕ 21-3-99 ರಂದು ಕೋಟನಳ್ಳಿ ಗ್ರಾಮದ ಸೋನವ್ವ ಹುಲ್ಲಪ್ಪ ರಾತೋಡ್ ಎನ್ನುವ ಮಹಿಳೆ ಮನೆಗೆ ಸಾರಾಯಿ ಗುತ್ತಿಗೆದಾರರಿಗೆ